

# ಮೃಗತೃಷ್ಣೆ

THE MIRAGE

■ ಕೇಶವರೆಡ್ಡಿ ಹಂದ್ರಾಳ
ಕಲೆ: ಮನೋಹರ ಆಚಾರ್ಯ

## ಸೂತಕದ ದಾರಿಯಲ್ಲಿ ಬದುಕಿನ ಚೆಲ್ಲಾಪಿಲ್ಲಿ ಚಿತ್ರಗಳು

ಮನೋಹರ್ ಕುಂಜು ಐದು ಬಾಕ್ಸುಗಳಿದ್ದ ಕ್ಯಾರಿಯರನ್ನ ಹಿಡಿದು ಬಂದಿದ್ದ. ಸೋಫಾದ ಹಿಂದಕ್ಕೆ ಇದ್ದ ಡೈನಿಂಗ್ ಟೇಬಲ್ಲಿಗೆ ಶಿಫ್ಟ್ ಆಗಿದ್ದೆವು. ಕೆ.ಎಮ್. ನಯ್ಯಾರರ ವರ್ತನೆ, ಮಾತು, ಇತರರೊಂದಿಗೆ ಅವರು ಮಾತನಾಡುತ್ತಾ ಅಭಿವ್ಯಕ್ತಿಗೊಳ್ಳುವ ರೀತಿ ನನ್ನನ್ನು ಒಂದು ರೀತಿ ವಿಚಿತ್ರವಾದ ಗೊಂದಲಕ್ಕೆ ಇಳಿಸುತ್ತಿತ್ತು. ನಯ್ಯಾರ್ ಯಾವ ಆಯಾಮದಲ್ಲಿ 'ಪರ್ಫೆಕ್ಟ್' ಎಂಬುದು ತಿಳಿಯಲು ಯಾರಿಗಾದರೂ ಕಷ್ಟಸಾಧ್ಯವೆನಿಸುತ್ತಿತ್ತು. ಕುಂಜು ಸಾವಯವ ಬಾಳೆ ಎಲೆಯ ಮೇಲೆ ಬಿಸಿಬಿಸಿ ಕುಸುಬಲಕ್ಕಿ ಅನ್ನ ಬಡಿಸಿ, ಘಮ್ಮನೆಯ ಬಿಸಿಬಿಸಿ ಫಿಶ್ ಕರಿಯನ್ನು ಸುರಿದಿದ್ದ. ಪಕ್ಕದಲ್ಲಿ ನುಗ್ಗೆಕಾಯಿ ಹುಳಿ ಮತ್ತು ಹಲಸಿನ ಹಪ್ಪಳ. ಅನ್ನವನ್ನು ಫಿಶ್ ಕರಿಯಲ್ಲಿ ಕಲಸುತ್ತಾ 'ನನಗೆ ತಿಳಿದಂತೆ ನನ್ನನ್ನು ಸೇರಿಸಿಕೊಂಡು ಪ್ರತಿಯೊಬ್ಬ ವ್ಯಕ್ತಿಯಲ್ಲೂ ತನಗೆ ಬೇಕಾದ ಮತ್ತು ಬೇಡವಾದ ವಸ್ತುಗಳ ಬಗ್ಗೆ ಸಮಾನವಾದ ಮೋಹ ಇದೆಯೆನಿಸುತ್ತದೆ. ಪ್ರಕೃತಿಯಲ್ಲಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳು ವೃಥಾ ವ್ಯರ್ಥವಾಗುವುದಕ್ಕೆ ಇದೊಂದು ಮುಖ್ಯ ಕಾರಣವೆನಿಸುತ್ತದೆ. ನಿಮ್ಮ ಜೊತೆಯಲ್ಲಿದ್ದು ನಿಮ್ಮೆಲ್ಲ ಚಟುವಟಿಕೆಗಳನ್ನು ಗಮನಿಸುತ್ತಿರುವಾಗ ನನಗೆ ಇಂಥ ಆಲೋಚನೆ ಬಂದಿರುವುದು ನನಗೇ ಅಚ್ಚರಿಯೆನಿಸುತ್ತದೆ. ಮನುಷ್ಯನ ಮೆದುಳಿನ ಯಾವುದೋ ಒಂದು ಭಾಗಕ್ಕೆ ವಾಸಿಯೇ ಮಾಡಲಾಗದ ವ್ಯಾಧಿಯೊಂದನ್ನು ತುಂಬಿ ದೇವರು ಸೃಷ್ಟಿ ಮಾಡಿದಂತಿದೆ. ಅಥವಾ ಮೆದುಳು ಫಾರ್ಮ್ ಆಗಿರುವುದೇ ಅಂಥ ವಿಚಿತ್ರ ರಾಸಾಯನಿಕಗಳ ಸಂಯೋಜನೆಯಿಂದ ಇರಬೇಕು. ಆದರೆ ಚರಿತ್ರೆಯಲ್ಲಿ ಕಂಡು ಬರುವ ಮಹಾತ್ಮಗಾಂಧಿ, ಮದರ್ ತೆರೆಸಾ, ಜಾರ್ಜ್ ವಾಶಿಂಗ್ಟನ್, ನೆಲ್ಸನ್ ಮಂಡೇಲಾ ಮುಂತಾದವರ ಮೆದುಳುಗಳು ಹೇಗೆ ಉತ್ಪಾದನೆಯಾದವು ಎಂಬುದು ದೊಡ್ಡ ಜಿಜ್ಞಾಸೆಯನ್ನು ಹುಟ್ಟಿಸುವುದಿಲ್ಲವೆ?' ಎಂದು ತುತ್ತನ್ನು ಬಾಯಿಗಿಟ್ಟುಕೊಂಡಿದ್ದೆ.

'ಅರೆ, ಎಂಥ ಆಲೋಚನೆಗಳು ನಿಮ್ಮವು. ನಿಜಕ್ಕೂ ದೇವರು ಸೃಷ್ಟಿಯ ರಹಸ್ಯವನ್ನು ಯಾರಿಗೂ ಒಂದಿಷ್ಟೂ ರಿವೀಲ್ ಆಗದಂತೆ ಮಾಡಿದ್ದಾನೆ. ಅದೆಲ್ಲಾ ಇರಲಿ ನಾಳೆಯೆಲ್ಲಾ ನಾವು ಪ್ರವಾಹ ಪೀಡಿತ ಪ್ರದೇಶಗಳಿಗೆ ಅದರಲ್ಲೂ ತುಂಬಾ ಗಂಭೀರ ಪರಿಣಾಮವಾಗಿರುವ ಪ್ರದೇಶಗಳಿಗೆ ಭೇಟಿ ನೀಡಿ ಪರಿಹಾರ ಕಾರ್ಯಗಳ ಮೇಲುಸ್ತುವಾರಿಯನ್ನು ಮಾಡಬೇಕಾಗಿದೆ' ಎಂದು ಹೇಳುತ್ತಿರುವಾಗಲೇ ಬಾಗಿಲು ತೆರೆದುಕೊಂಡು ಭಗವಾನ್ ಕುಟ್ಟಿ ಇನ್ನೊಬ್ಬ ವ್ಯಕ್ತಿಯೊಂದಿಗೆ ಕೊಠಡಿಯನ್ನು ಪ್ರವೇಶಿಸಿದ್ದ. ಪಂಚೆ, ಜುಬ್ಬಾ ತೊಟ್ಟಿದ್ದ ಭಗವಾನ್ ಕುಟ್ಟಿಯಷ್ಟೇ ಎತ್ತರವಿದ್ದ ವ್ಯಕ್ತಿಯ ಅಗಲವಾದ ಹಣೆಯನ್ನು ಗಂಧದ ದಪ್ಪನೆಯ ಪಟ್ಟಿಗಳು ಅಲಂಕರಿಸಿದ್ದವು. ಆ ವ್ಯಕ್ತಿಯನ್ನು ಕಂಡ ನಯ್ಯಾರ್ 'ಓಹ್, ಅಚ್ಯುತನ್ ನಂಬಿಯಾರ್, ಇದೇನು ಇದ್ದಕ್ಕಿದ್ದಂತೆ ಅದೂ ಇಂಥ ಅಪಾಯದ ಸಮಯದಲ್ಲಿ, ಬನ್ನಿ ಬನ್ನಿ ಕುಳಿತುಕೊಳ್ಳಿ' ಎಂದಿದ್ದರು.

ಅಚ್ಯುತನ್ ನಂಬಿಯಾರ್ ಎನ್ನುವ ವ್ಯಕ್ತಿ 'ನಯ್ಯಾರ್, ನಾನು ಏನೋ ಕೆಲಸದ ಮೇಲೆ ಮೊನ್ನೆ ಸಂಜೆ ಎರ್ನಾಕುಲಂಗೆ ಬಂದೆ. ಇಲ್ಲಿ ನೋಡಿದರೆ ಎಂಥ ಭಯಂಕರ ಅನಾಹುತ ಆಗಿಹೋಗಿದೆ ನೋಡು. ಅರೆ, ಮಾಧವನ್ ಪಿಳ್ಳೈ, ಅರುಂಧತಿ ಪಿಳ್ಳೈ ಇಲ್ಲವೆಂದು ನಂಬುವುದಾದರೂ ಹೇಗೆ ನಯ್ಯಾರ್? ಆತ್ಮೀಯರ ಹೆಣಗಳೂ ಕೂಡ ಸಿಗದ ಸ್ಥಿತಿಯಲ್ಲಿ ನೀನು ವಿಸ್ಕಿ ಜೊತೆಗೆ ಫಿಶ್ ಕರಿ ತಿನ್ತಾ ಇದ್ದೀಯ? ಮಾಮೂಲಿ ನೀನು ಎಲ್ಎಸ್ಡಿ ಟ್ರಿಪ್ ಮುಗಿಸಿರಬೇಕು. ತಿಂಗಳ ಹಿಂದೆ ಮಾಧವನ್ ಪಿಳ್ಳೈ ಕನ್ಯಾಕುಮಾರಿಗೆ ಬಂದಿದ್ದಾಗಲೇ ಹತ್ತಿರದಲ್ಲೇ ದೊಡ್ಡ ಗಂಡಾಂತರ ಇರುವುದಾಗಿ ಆತನಿಗೆ ಹೇಳಿದ್ದೆ ಮತ್ತು ಮರೆತೂಬಿಟ್ಟಿದ್ದೆ. ಆದರೆ ಮಾಧವನ್ ಪಿಳ್ಳೈ ಮರೆತದ್ದು ತಪ್ಪು. ನಿನಗೂ ಹೇಳ್ತೀನಿ ಕೇಳು, ಆಕಾಶದಲ್ಲಿ ಹಾರಾಡುತ್ತಿರುವ ನಿನ್ನ ಉಪ್ಪರಿಗೆ ಇನ್ನಿಪ್ಪತ್ತು ದಿನಗಳೊಳಗೆ ಧೊಪ್ಪೆಂದು ನೆಲಕ್ಕುರುಳುತ್ತದೆ. ಅದರಿಂದ ಅಂಥ ಲಾಸೇನೂ ನಿನಗಾಗದಿದ್ದರೂ ನಿನ್ನ ಖ್ಯಾತಿಗೆ ಒಂದಿಷ್ಟು ಪೆಟ್ಟು ಬೀಳುವುದಂತೂ ಗ್ಯಾರಂಟಿ. ಆ ಘಟನೆಯ ನಂತರ ನಿನ್ನ ಸರ್ವತೋಮುಖ ಏಳಿಗೆ ಮತ್ತೊಮ್ಮೆ ಶುರುವಾಗುತ್ತದೆ' ಎಂದು ಸುದೀರ್ಘವಾಗಿ ಮಾತನಾಡಿ ನನ್ನ ಕಡೆ ನೋಡಿದ್ದರು.

ನಯ್ಯಾರ್, 'ಇವರು ಅಚ್ಯುತನ್ ನಂಬಿಯಾರ್ ಅಂತ. ಕನ್ಯಾಕುಮಾರಿಯಲ್ಲಿ ವಾಸವಿರೋದು. ಆದರೆ ಸದಾ ಗಾಲಿಯ ಮೇಲೇ ಇರುತ್ತಾರೆ. ಒಮ್ಮೊಮ್ಮೆ ಭೂಗತರಾದರೆ ಎಲ್ಲಿರುವರೆಂದು ಆ ತಾಯಿ ಕನ್ಯಾಕುಮಾರಿಗೂ ಪತ್ತೆಯಾಗುವುದಿಲ್ಲ. ಹುಟ್ಟಿದ ದಿನ ಮತ್ತು ಟೈಮು ಸರಿಯಾಗಿ ಹೇಳಿದರೆ ಎದುರಾಗುವ ಗಂಡಾಂತರಗಳ ಬಗ್ಗೆ ಪರ್ಫೆಕ್ಟಾಗಿ ಹೇಳಿಬಿಡ್ತಾರೆ. ಸರಿಬಿದ್ದರೆ ವಿಷಕಂಠನ ಜೊತೆಯಲ್ಲೇ ವಿಸ್ಕಿ ಕುಡಿದು